# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ. ಹೆಚ್. ರಸ್ತೆ, ತುಮಕೂರು-572 103 ☎:0816-2255650,2273511 ಫ್ಯಾಕ್ಸ್:0816-2270719

ಸಂಖ್ಯೆ:ತುವಿ:ಪವಿ:2024-25: ದಿನಾಂಕ:20.01.2025

## : ಅಧಿಸೂಚನೆ :

**ವಿಷಯ :** 2024-25 ನೇ ಶೈಕ್ಷಣಿಕ ಸಾಲಿನ 2025 ರ ಫೆಬ್ರವರಿ-ಮಾರ್ಚ್ ಮಾಹೆಗಳಲ್ಲಿ ನಡೆಯಲಿರುವ ಬಿ.ಬಿ.ಎ. ಪದವಿಗಳ ಏಳನೇ ಸೆಮಿಸ್ಟರ್‌ನ ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿನ ಪರೀಕ್ಷೆಗಳಿಗೆ **ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ** ಪರೀಕ್ಷಾ ಶುಲ್ಕ ಪಾವತಿಸಿಕೊಳ್ಳುವ ಕುರಿತು.

......

2024-25 ನೇ ಶೈಕ್ಷಣಿಕ ಸಾಲಿನ 2025 ರ ಫೆಬ್ರವರಿ-ಮಾರ್ಚ್ ಮಾಹೆಗಳಲ್ಲಿ ನಡೆಯಲಿರುವ ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿ ಬರುವ ಬಿ.ಬಿ.ಎ. ಪದವಿಯ ಏಳನೇ ಸೆಮಿಸ್ಟರ್‌ಗೆ UUCMS ತಂತ್ರಾಂಶದ ಮೂಲಕ ಪ್ರವೇಶ ಪಡೆದಿರುವ (ಶೈಕ್ಷಣಿಕ ವಿಭಾಗದಿಂದ ಪ್ರವೇಶಾನುಮೋದನೆ ಪಡೆದಿರುವ ವಿದ್ಯಾರ್ಥಿಗಳಿಂದ) ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಪಾವತಿಸಿಕೊಳ್ಳುವುದು.

**ಪರೀಕ್ಷಾ ಶುಲ್ಕ ಪಾವತಿಸಿಕೊಳ್ಳುವ ಸ್ಕೀಮ್ ಮತ್ತು ಸೆಮಿಸ್ಟರ್‌ವಾರು ವಿವರ**

| Scheme | Semester |
|---|---|
| UG NEP 2021 | VII Semesters (Freshers) |

ಎಲ್ಲಾ ಕಾಲೇಜಿನ ಪ್ರಾಂಶುಪಾಲರು UUCMS ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕವನ್ನು ಪಾವತಿಸಿದ ವಿದ್ಯಾರ್ಥಿಗಳ ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಪರಿಶೀಲಿಸಿ UUCMS ತಂತ್ರಾಂಶದ ಮೂಲಕ ಅಂಗೀಕರಿಸುವುದು.

## ಗಮನಿಸಬೇಕಾದ ದಿನಾಂಕಗಳು

| | | |
|---|---|---|
| 1. | ವಿದ್ಯಾರ್ಥಿಗಳಿಗೆ ದಂಡ ರಹಿತ ಶುಲ್ಕ ಪಾವತಿಸಲು ದಿನಾಂಕ | 23.01.2025 ರಿಂದ 28.01.2025 |
| 2. | ವಿದ್ಯಾರ್ಥಿಗಳಿಗೆ ರೂ 100-00/- ದಂಡ ಶುಲ್ಕದೊಂದಿಗೆ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 29.01.2025 |
| 3. | ವಿದ್ಯಾರ್ಥಿಗಳಿಗೆ ರೂ 500-00/- ಗಳ ವಿಶೇಷ ಶುಲ್ಕದೊಂದಿಗೆ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 30.01.2025 |
| 4. | ಪ್ರಾಂಶುಪಾಲರು ಯು.ಯು.ಸಿ.ಎಂ.ಎಸ್. ಲಾಗಿನ್‌ನಿಂದ ಪರೀಕ್ಷಾ ಶುಲ್ಕ ಪಾವತಿಸಿದ ವಿದ್ಯಾರ್ಥಿಗಳ ಅರ್ಜಿಯನ್ನು ಪರಿಶೀಲಿಸಿ ಅನುಮೋದಿಸಲು ಕೊನೆಯ ದಿನಾಂಕ | 31.01.2025 |
| 5. | ಕಾಲೇಜಿನವರು UUCMS ನಲ್ಲಿ ಆಂತರಿಕ ಅಂಕಗಳನ್ನು ಹಾಗೂ ವಿದ್ಯಾರ್ಥಿಗಳ ಹಾಜರಾತಿ ಮಾಹಿತಿಗಳನ್ನು ನಮೂದಿಸಲು ಕೊನೆಯ ದಿನಾಂಕ | 04.02.2025 |
| 6. | ಕಾಲೇಜಿನವರು ವಿದ್ಯಾರ್ಥಿಗಳು UUCMS ಮೂಲಕ ಪಾವತಿಸಿರುವ ಪರೀಕ್ಷಾ ಶುಲ್ಕದ ವಿವರವನ್ನು (Hard Copies) ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 01.02.2025 |
| 7. | ಪ್ರವೇಶ ಪತ್ರವನ್ನು (Hallticket) UUCMS ತಂತ್ರಾಂಶದ ಮೂಲಕ ಪಡೆಯುವ ದಿನಾಂಕ | 05.02.2025 ರಿಂದ 10.02.2025 |
| 8. | ಸೈದ್ಧಾಂತಿಕ ಪರೀಕ್ಷೆಗಳನ್ನು ಪ್ರಾರಂಭಿಸುವ ದಿನಾಂಕ | 27.02.2025 |

ಬಿ.ವಿ.ಎ. ಪದವಿಯ ಏಳನೇ ಸೆಮಿಸ್ಟರ್‌ಗೆ ಸಂಬಂಧಿಸಿದ ಪ್ರಾಯೋಗಿಕ ಪರೀಕ್ಷೆಗಳನ್ನು ದಿನಾಂಕ:11.02.2025 ರಿಂದ ನಡೆಸತಕ್ಕದ್ದು. ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿ ಅಧ್ಯಕ್ಷರುಗಳಿಂದ ಅನುಮೋದನೆ ಪಡೆದುಕೊಂಡು UUCMS ತಂತ್ರಾಂಶದಲ್ಲಿ ನಮೂದಿಸುವುದು ಮತ್ತು ಪರೀಕ್ಷಾ ಅಧೀಕ್ಷಕರು/ಪ್ರಾಂಶುಪಾಲರುಗಳು ಸಂಬಂಧಿಸಿದ ಪರೀಕ್ಷಾ ಕೇಂದ್ರಗಳಲ್ಲಿ ಪ್ರಕಟಿಸುವುದು.

| **ಸೆಮಿಸ್ಟರ್** | **ಕೋರ್ಸ್** | **ಪರೀಕ್ಷಾ ಶುಲ್ಕ (ನವೀನ)** |
|---|---|---|
| **VII** | **B.V.A** | **ರೂ. 1,100-00/-** |

2024-25 ನೇ ಸಾಲಿನ ಯು.ಯು.ಸಿ.ಎಂ.ಎಸ್. ತಂತ್ರಾಂಶದ ಮೂಲಕ ಪ್ರವೇಶ ಪಡೆದು **ಏಳನೇ** (ನವೀನ) ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಅರ್ಹ ವಿದ್ಯಾರ್ಥಿಗಳು ತಮ್ಮ ಲಾಗಿನ್ ಮೂಲಕ ಪರೀಕ್ಷಾ ಶುಲ್ಕ ಪಾವತಿಸುವಂತೆ ಹಾಗೂ ಸದರಿಯವರು ವ್ಯಾಸಂಗ ಮಾಡುತ್ತಿರುವ ಅನುಮೋದಿತ ಪತ್ರಿಕೆ/ವಿಷಯಗಳ ವಿವರಗಳನ್ನು ಸರಿಯಾಗಿ ಪರಿಶೀಲಿಸುವಂತೆ ತಿಳಿಸಿ ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳ ಗಮನಕ್ಕೆ ತರುವುದು.

**ವಿದ್ಯಾರ್ಥಿಗಳು ಈ ಕೆಳಗೆ ನಮೂದಿಸಿರುವ ಇತರೆ ಶುಲ್ಕಗಳನ್ನೂ ಸಹ ಕಡ್ಡಾಯವಾಗಿ ಪಾವತಿಸುವುದು.**

| ಕ್ರ.ಸಂ. | ಇತರೆ ಶುಲ್ಕಗಳ ವಿವರ | ಮೊತ್ತ (ರೂ. ಗಳಲ್ಲಿ) |
|---|---|---|
| 1. | ಅಂಕಪಟ್ಟಿ ಶುಲ್ಕ (ಪ್ರತಿ ಸೆಮಿಸ್ಟರ್‌ಗೆ) | 156-00 |
| 2. | ಪರೀಕ್ಷಾ ಸಿದ್ಧತಾ ಶುಲ್ಕ (Processing fee) (ಪ್ರತಿ ಸೆಮಿಸ್ಟರ್‌ಗೆ) | 70-00 |

ಪರೀಕ್ಷಾ ಕೇಂದ್ರ ಹೊಂದಿರುವ ಕಾಲೇಜಿನವರು ತಮ್ಮ ಕೇಂದ್ರದಲ್ಲಿ ಪರೀಕ್ಷೆ ನಡೆಯುವ ಒಟ್ಟು ದಿನಗಳಲ್ಲಿ ಒಂದು ದಿನದ ಗರಿಷ್ಠ ವಿದ್ಯಾರ್ಥಿಗಳ ಸಂಖ್ಯೆಯನ್ನು ನಮೂದಿಸಿ ಪ್ರತಿ ವಿದ್ಯಾರ್ಥಿಗೆ ರೂ. 06-00/- ಗಳಂತೆ ಪ್ರತ್ಯೇಕ ಬಿಲ್ಲನ್ನು ಸಿದ್ಧಪಡಿಸಿ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು.

**ಉಲ್ಲೇಖ (1) ರ ದಿನಾಂಕ: 20.01.2023 ರ ಸಿಂಡಿಕೇಟ್ ಸಭಾ ನಿರ್ಣಯದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನವು ಸರ್ಕಾರದ ಡಿಬಿಟಿ (Direct Beneficiary Transfer) ಯೋಜನೆಯಡಿಯಲ್ಲಿ ನೇರವಾಗಿ ವಿದ್ಯಾರ್ಥಿಗಳ ಖಾತೆಗೆ ಜಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಸಂಬಂಧಪಟ್ಟ ಕಾಲೇಜುಗಾಗಲಿ ಅಥವಾ ವಿಶ್ವವಿದ್ಯಾನಿಲಯಕ್ಕಾಗಲಿ ವಿದ್ಯಾರ್ಥಿ ವೇತನವು ಮಂಜೂರಾಗದ ಹಿನ್ನೆಲೆಯಲ್ಲಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಂದ ಪೂರ್ಣ ಪ್ರಮಾಣದ ಪರೀಕ್ಷಾ ಶುಲ್ಕವನ್ನು ಸೆಮಿಸ್ಟರ್‌ವಾರು ಕಡ್ಡಾಯವಾಗಿ ಪಾವತಿಸಿಕೊಳ್ಳುವುದು.**

ವಿದ್ಯಾರ್ಥಿಯು ಪರೀಕ್ಷಾ ಶುಲ್ಕ ಪಾವತಿಸಿದಾಕ್ಷಣ ಪರೀಕ್ಷೆ ಬರೆಯಲು ಅರ್ಹನೆಂದು ತಿಳಿಯಬಾರದು. ವಿಶ್ವವಿದ್ಯಾನಿಲಯದ ನಿಯಮಾನುಸಾರ ಅರ್ಹತೆಯಿದ್ದಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶವಿರುತ್ತದೆ. ಯಾವುದೇ ಕಾರಣಕ್ಕೂ ಪರೀಕ್ಷಾ ಕೇಂದ್ರವನ್ನು ಬದಲಾಯಿಸುವಂತಿಲ್ಲ.

ವಿಶ್ವವಿದ್ಯಾನಿಲಯದಿಂದ ಪ್ರವೇಶಾನುಮೋದನೆ ಪಡೆದ ಎಲ್ಲಾ ಅರ್ಹ ವಿದ್ಯಾರ್ಥಿಗಳು ತಮ್ಮ ಲಾಗಿನ್ ಮೂಲಕ ಪರೀಕ್ಷಾ ಶುಲ್ಕವನ್ನು UUCMS ತಂತ್ರಾಂಶದ ಮೂಲಕ ನಿಗದಿತ ದಿನಾಂಕದೊಳಗೆ ಪಾವತಿಸುವುದು. ಕಾಲೇಜಿನವರು ಪರೀಕ್ಷಾ ಶುಲ್ಕ ಪಾವತಿಸಿರುವ ಪಟ್ಟಿಯನ್ನು ದ್ವಿ-ಪ್ರತಿಗಳಲ್ಲಿ (ಪರೀಕ್ಷಾ ವಿಭಾಗಕ್ಕೆ ಒಂದು ಪ್ರತಿ ಮತ್ತು ಹಣಕಾಸು ವಿಭಾಗಕ್ಕೆ ಮತ್ತೊಂದು ಪ್ರತಿ) ಈ ಹಿಂದಿನ ನಮೂನೆಯಲ್ಲಿ ಭರ್ತಿ ಮಾಡಿ ತಪ್ಪದೇ ಸಲ್ಲಿಸುವುದು.

**ಸೈದ್ಧಾಂತಿಕ (Theory) ಪರೀಕ್ಷೆಗಳ ವಿವರಗಳನ್ನೊಳಗೊಂಡ ವೇಳಾಪಟ್ಟಿಯನ್ನು ಮುಂದೆ ತಿಳಿಸಲಾಗುವುದು.**

## ಆಂತರಿಕ ಅಂಕಗಳನ್ನು ಸಲ್ಲಿಸುವ ಕುರಿತು ಸೂಚನೆಗಳು :

1. ಸೈದ್ಧಾಂತಿಕ (Theory) ಪರೀಕ್ಷೆಗಳು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ UUCMS ತಂತ್ರಾಂಶದಲ್ಲಿ ನಿಗಧಿಪಡಿಸಲಾದ ದಿನಾಂಕದೊಳಗೆ ಆಂತರಿಕ ಅಂಕಗಳನ್ನು ಮತ್ತು ವಿದ್ಯಾರ್ಥಿಗಳ ಹಾಜರಾತಿ ವಿವರಗಳನ್ನು ಕಾಲೇಜಿನವರು ನಮೂದಿಸುವುದು ಹಾಗೂ ಪರಿಶೀಲಿಸಿ ಅನುಮೋದಿಸುವುದು ಹಾಗೂ ಪಟ್ಟಿಯನ್ನು (Hard copy) **"ಮಾನ್ಯ ಕುಲಸಚಿವರು(ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು"** ಇವರ ಹೆಸರಿಗೆ ಪರೀಕ್ಷಾ ವಿಭಾಗದ ಟಪಾಲ್ (Despatch) ನಲ್ಲಿ ಸಲ್ಲಿಸುವುದು.
2. ಆಂತರಿಕ ಅಂಕಗಳನ್ನು UUCMS ತಂತ್ರಾಂಶದಲ್ಲಿ ನಮೂದಿಸುವ ಮುನ್ನ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು ಸರಿಯಾಗಿ ಪರಿಶೀಲಿಸಿ ನಮೂದಿಸಿದ ನಂತರ ಪ್ರಾಂಶುಪಾಲರು ಪರಿಶೀಲಿಸಿ ದೃಢೀಕರಿಸಿ ಸಲ್ಲಿಸುವುದು. ಸಲ್ಲಿಸುವಾಗ ವಿಳಂಬವಾದಲ್ಲಿ/ಸರಿಯಾಗಿ ನೀಡದಿದ್ದಲ್ಲಿ ದಿನವೊಂದಕ್ಕೆ ರೂ.1,000-00/- ಗಳಂತೆ ಗರಿಷ್ಠ ರೂ. 10,000-00/- (ಹತ್ತು ಸಾವಿರ) ಗಳನ್ನು ದಂಡವಾಗಿ ವಿಧಿಸಲಾಗುತ್ತದೆ.
3. ವಿದ್ಯಾರ್ಥಿಗಳಿಗೆ ಆಂತರಿಕ ಅಂಕಗಳನ್ನು ನೀಡುವುದು ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರ ಜವಾಬ್ದಾರಿಯಾಗಿದ್ದು, ಯಾವುದೇ ರೀತಿಯ ತಪ್ಪುಗಳಾಗದಂತೆ ಎಚ್ಚರಿಕೆ ವಹಿಸುವುದು.
4. ಫಲಿತಾಂಶ ಪ್ರಕಟಗೊಂಡ ನಂತರ ಯಾವುದೇ ಕಾರಣಕ್ಕೂ ಆಂತರಿಕ ಅಂಕಗಳನ್ನು ಬದಲಿಸುವುದಿಲ್ಲ.

**ಎಲ್ಲಾ ಪ್ರಾಂಶುಪಾಲರುಗಳು ಸಹಕರಿಸಬೇಕಾಗಿ ಕೋರಲಾಗಿದೆ.**

20/1/25
**ಕುಲಸಚಿವರು(ಪರೀಕ್ಷಾಂಗ)**
ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1. ಪ್ರಾಂಶುಪಾಲರು, ಸರ್ಕಾರಿ ಚಿತ್ರಕಲಾ ಮಹಾವಿದ್ಯಾಲಯ, ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣ, ಬಿ.ಹೆಚ್. ರಸ್ತೆ, ತುಮಕೂರು.
2. ಪ್ರಾಂಶುಪಾಲರು, ಘಟಕ / ಎಲ್ಲಾ ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

**ಪ್ರತಿಗಳು:**

1. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಎಂ.ಎಸ್. ಬಿಲ್ಡಿಂಗ್-2, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001.
2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಮಾನ್ಯ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಅಧ್ಯಕ್ಷರು, ಎಲ್ಲಾ ಸ್ನಾತಕ ವಿಷಯಗಳ ಪರೀಕ್ಷಾ ಮಂಡಳಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
8. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು - **ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಇಂದೇ ಪ್ರಕಟಿಸುವುದು ಹಾಗೂ ಎಲ್ಲಾ ಸ್ನಾತಕ ಪದವಿ ಕಾಲೇಜುಗಳಿಗೆ ಇಮೇಲ್ ಕಳುಹಿಸುವುದು.**
9. ಫಲಿತಾಂಶ ಗಣಕೀಕರಣ ವಿಭಾಗ, ಪರೀಕ್ಷಾ ಭವನ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
10. ಕಛೇರಿ ಪ್ರತಿ.